( ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು )

ಅಸಲು ದಾವೆ ನಂ.202/2016

**ದಿನಾಂಕಃ 21-11-2022, ಪಿ ಡಬ್ಲ್ಯೂ–1**

ಪಾಟೀ ಸವಾಲು ಃ ಶ್ರೀ ಎಂ ಎನ್ ಆರ್ ವಕೀಲರಿಂದಃ

ನನ್ನ ತಂದೆ ಜೊತೆಗೆ ಒಟ್ಟು 4 ಜನ ಅಣ್ಣ ತಮ್ಮಂದಿರು. ನನ್ನ ತಾತನಿಗೆ ಸರ್ವೆ ನಂ. 95/2 ರಲ್ಲಿ ಒಟ್ಟು 3 ಎಕರೆ 33 ಗುಂಟೆ ಜಮೀನು ಇರುತ್ತದೆ. ಸದರಿ ಜಮೀನು ನನ್ನ ತಾತನ ಹೆಸರಿನಲ್ಲಿ ಇದೆ. ಸರ್ವೆ ನಂ. 95/2 ರ ಜಮೀನನ್ನು ನಾನು ಈ ದಾವೆಯಲ್ಲಿ ಸೇರಿಸಿಲ್ಲ, ಸದರಿ ಸರ್ವೆ ನಂಬರ್ ಈಗಾಗಲೇ ವಿಭಾಗ ವಾಗಿದೆ ಎಂದು ನುಡಿಯುತ್ತಾರೆ. ಸದರಿ ವಿಭಾಗವು ಹನುಮಂತ ಶೆಟ್ಟಿ, ರಮೇಶ ಶೆಟ್ಟಿ, ತಮ್ಮಯ್ಯ ಶೆಟ್ಟಿ ಹಾಗೂ ಪುಟ್ಟರಾಜು ರವರ ನಡುವೆ ಆಗಿರುತ್ತದೆ. ಸರ್ವೆ ನಂ. 95/2 ರಲ್ಲಿ ನನ್ನ ತಂದೆ ಹಿಸ್ಸೆ ಗೆ 34 ಗುಂಟೆ ಜಮೀನು ಬಂದಿರುತ್ತದೆ. ಸದರಿ ಜಮಿನಿನ ಪಹಣಿಯು ಅಕ್ಕಮ್ಮನ ಹೆಸರಿನಲ್ಲಿ ಚಾಲ್ತಿಯಲ್ಲಿರುತ್ತದೆ. ಅಕ್ಕಮ್ಮ ಎಂದರೆ ನನ್ನ ಚಿಕ್ಕಮ್ಮ (ತಮ್ಮಯ್ಯಶೆಟ್ಟಿ ರವರ ಹೆಂಡತಿ). ನನ್ನ ತಂದೆಯ ಹಿಸ್ಸೆಗೆ ಬಂದ ನಂತರ ನನ್ನ ತಂದೆ ಬರೆದುಕೊಟ್ಟರು ಎಂದರೆ ಸರಿ. ಹನುಮಂತಯ್ಯ ಎಂದರೆ ನನ್ನ ಚಿಕ್ಕಪ್ಪ. ಹನುಮಂತಯ್ಯ ಶೆಟ್ಟಿ ಎಂದರೆ ನನ್ನ ತಾತ.

ಸರ್ವೆ ನಂ 95/2 ರ ವಿವರಗಳನ್ನು ನಾನು ಹೇಳಿರುವುದಿಲ್ಲ. ಸರ್ವೆ ನಂ.95/1 ರ ಜಮೀನು ಕ್ರಯಕ್ಕೆ ಕೊಂಡಂತಹ ಜಮೀನು. ದಾವಾ ಆಸ್ತಿ ನನ್ನ ತಂದೆಗೆ ದರಕಾಸ್ತು ಮುಖಾಂತರ ಬಂದಿರುತ್ತದೆ. ನಮ್ಮ ಕುಟುಂಬಕ್ಕೆ 5 ಮನೆಗಳಿವೆ. ಸದರಿ ಮನೆಗಳನ್ನು ದಾವಾದಲ್ಲಿ ಸೇರಿಸಿಲ್ಲ ಎಂದರೆ ಸರಿ. ದಾವಾ ಆಸ್ತಿಯನ್ನು ಹೊರತು ಪಡಿಸಿ ಬೇರೆ ಜಮೀನುಗಳಿವೆ ಎಂದರೆ ಸರಿಯಲ್ಲ.

ನನ್ನ ತಂದೆ 2013 ನೇ ಇಸವಿಯಲ್ಲಿ ಮೃತಪಟ್ಟಿರುತ್ತಾರೆ. 1995 ರಿಂದ ನಾನು ಪ್ರತ್ಯೇಕವಾಗಿರುತ್ತೇನೆ. ಸದರಿ ವಿಚಾರವನ್ನು ನಾನು ವಕೀಲರಿಗೆ ಹೇಳಿ ಬರೆಸಿಲ್ಲ. ಈಗ ಎಲ್ಲರೂ 8 ವರ್ಷಗಳಿಂದ ಪ್ರತ್ಯೇಕವಾಗಿರುತ್ತಾರೆ. ಎಲ್ಲರ ದಾಖಲೆಗಳು ಪ್ರತ್ಯೇಕವಾಗಿ ಬರುತ್ತಿವೆ ಎಂದರೆ ಸರಿ.

ನಿಪಿ-5 ನ್ನು ನನ್ನ ತಂದೆಯ ಸ್ವಯಾರ್ಜಿತ ಎಂದು ತೋರಿಸಲು ಹಾಜರುಪಡಿಸಿದ್ದೇನೆ ಎಂದರೆ ಸರಿ. ದಿಃ 23-05-2012 ರಲ್ಲಿ ನನ್ನ ತಂದೆ ಜೀವಿತ ಕಾಲವಾವಧಿಯಲ್ಲಿ ಮರಣ ಶಾಸನ ಪತ್ರವನ್ನು

ಬರೆದಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಮರಣ ಶಾಸನ ಪತ್ರವು ನೊಂದಾಣಿ ಆಗಿದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಮರಣ ಶಾಸನ ಗೊತ್ತಾದ ನಂತರ ತಕರಾರನ್ನು ಸಲ್ಲಿಸಿರುತ್ತೇನೆ. ಸದರಿ ಮರಣ ಶಾಸನದ ಪ್ರಕಾರ 1 ನೇ ಪ್ರತಿವಾದಿಗೆ 20 ಗುಂಟೆ ಜಮೀನು, 4 ನೇ ಪ್ರತಿವಾದಿ ಯಾದ ಪ್ರಕಾಶ ರವರಿಗೆ 1 ಎಕರೆ 20 ಗುಂಟೆ ಜಮೀನು, 5 ನೇ ಪ್ರತಿವಾದಿಗೆ 1 ಎಕರೆ 19 ಗುಂಟೆ ಜಮೀನನ್ನು ಮರಣ ಶಾಸನ ಮಾಡಿರುತ್ತಾರೆ ಎಂದರೆ ಸರಿಯಲ್ಲ.

ಸರ್ವೆ ನಂ. 95/2 ರ ಜಮೀನು ಹಾಗೂ ಮನೆಗಳನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿಯಲ್ಲ.

ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಕಾಲವಕಾಶ ಕೋರಿದ್ದು ಕಾಲವಕಾಶ ನೀಡಲಾಯಿತು.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇದೆ.

(ರಘು ಎಂ.)
2ನೇ ಅಧಿಕ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ
ಅರಕಲಗೂಡು